(53) 2

Regd No B G 155

19—3—1965

ಸತ್ಯವಾದಿ

48 Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆ ಸಿರಸ್ತೇದಾರ್ ಎಂ ವಿ ಸುಬ್ಬರಾಯರು ಸಂಪಾದಕರು — ಧರ್ಮಪ್ರಚಾರವಿಂತ ಎಂ ಎಸ್ ಕೃಷ್ಣರಾವ್ 2 ಪೈಸ

ಒಂಪಗಡಿಗೆ ನೀರಿಗೆ 6 ಪೈಸೆ

ವೆಲ್ಲೂರು — ಆಂಬೂರಿನಲ್ಲಿ ಒಂದು ಗಡಿಗೆ ನೀರಿಗೆ 3 ಪೈಸೆ ಯಿಂದ 6 ಪೈಸೆ ವರೆಗೆ ಮೂಂಲಾಗುತ್ತಿರುವುದಾಗಿ ಪಂದಿ ಹೂಗಿದೆ.

★

ಬರುವವರ ಮೇಲೆ ಹತೋಟಿ

ನವದೆಹಲಿ — ಸರಿಯಾದ ವಲಸೆ ಸರ್ಟಿಫಿಕೇಟು ಮತ್ತು ವೀಸ್ಯಾಪಾಸ್ಪೋರ್ಟುಗಳಿರುವ ಪೂರ್ವ ಪಾಕಿಸ್ತಾನಿಗರನ್ನು ಹೊರತು ಏಪ್ರಿಲ್ಲು 1 ರಿಂದ ಭಾರತಕ್ಕೆ ಸೇರಿಸಲು ಭಾರತ ಸರಕಾರ ನಿರ್ಧರಿಸಿದೆ.

ಅಂಜನೇಯ ವಿಗ್ರಹ

ನಿಡದವೋಲು — ಒಂದು ಭಾವಿಯನ್ನು ತೋಡುವಾಗ ಅಂಜನೇಯನ ವಿಗ್ರಹವು ಸಿಕ್ಕಿತು : ಅದು 15 ಅಂಗುಲ ಎತ್ತರ ಮತ್ತು 840 ತೊಲ ತೂಕವಿದೆ.

ರೂಪಾಯಿನ ಭದ್ರತೆ

ಮದಂತಸು — ರೂಪಾಯಿನ ಭದ್ರತೆಯ ವಿಚಾರದಲ್ಲಿ ಸರಕಾರವು ರಿಜರ್ವ್ ಬ್ಯಾಂಕಿನ ತಿಳುವಳಿಕೆ ಪಡೆಯಬೇಕು ; ಆ ಸೂಚನೆಯನ್ನು ಸರಕಾರವು ಒಪ್ಪದಿದ್ದಲ್ಲಿ, ಅದನ್ನು ಪಾರ್ಲಿಮೆಂಟು ಅಧಿವೇಶನದ ಪಾರ್ಲಿಮೆಂಟಿನ ಸಮಿತಿಯು ಗಮನಕ್ಕೆ ತರಬೇಕು. ಎಂದು ಶ್ರೀ ಹೆಚ್ ಏ ಆರ್ ಅಯ್ಯಂಗಾರ್ ಹೇಳಿದರು

ಲಾಗಿದೆ.

★

ಶಾಲೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟಾವಧಾನಿ ಜ್ಯೋತಿರ್ವಿದ್ವನ್ಮಣಿ
ಪಂಚಕ್ಕೃಷ್ಣಜೋಯಿಸರಿಂದ

ಈ ವರ್ಷದ ತಡಿಗೆ ಸಾತಿ

ಉಚಿತ ಶಿಕ್ಷಣ

ಬೆಂಗಳೂರು — ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಉಚಿತವಾಗಿ ಮಾಡಬೇಕೆಂದು ಶಾಸನಸಭೆಯಲ್ಲಿ ಮೊನ್ನೆ ಶ್ರೀ ಎಂ ಸಿ ಒಡಪ್ಪನವರು ಹೇಳಿದರು.

★

ಚರ್ಚಿಲ್ಲರ ಸ್ಮರಣಾರ್ಥ

ಲಂಡನ್ — ಚರ್ಚಿಲ್ಲರ ಸ್ಮರಣಾರ್ಥವಾಗಿ 5 ಪೆನಿಗಳ ನಾಣ್ಯಗಳನ್ನು ಹೊರಡಿಸಲಾಗುವುದು.

★

ಸಿಕ್ಕಿಂ ಮಹಾರಾಜ ಮಹಾರಾಣಿ

ಕಲ್ಕತ್ತಾ — ಸಿಕ್ಕಿಮ್ಮಿನ ಮಹಾರಾಜ ಮತ್ತು ಮಹಾರಾಣಿಯವರು ಎಂದು ದಿನಗಳ ಭೇಟಿಗಾಗಿ ಇಲ್ಲಿಗೆ ಬಂದಿರುವರು.

ಭೀಕರ ಪ್ರದರ್ಶನ

ಡಮಾಸ್ಕಸ್ — 10 ಮಂದಿ ಇರಾಕಿನ ಪ್ರದರ್ಶನಕಾರರು ಜಾಗ್ವಾಡಿಸಲ್ಪಟ್ಟ ಪಶ್ಚಿಮ ಜರ್ಮನಿ ರಾಯಭಾರಿ ಕಚೇರಿ ಮೇಲೆ ಧಾಳಿ ನಡೆಸಿ ಜರ್ಮನ್ ಧ್ವಜವನ್ನು ಕೆಳಗಿಳಿಸಿದರು — ಈ ವಿಷಯದಲ್ಲಿ ಪಶ್ಚಿಮ ಜರ್ಮನಿ ಭಾಸ್ಸಲರು, ಇರಾಕು ಸರಕಾರ ಆ ಕಟ್ಟಡಗಳಿಗೆ ರಕ್ಷಣೆ ಗಳಿಗೆ ಸೂಕ್ತ ರಕ್ಷಣೆ ಕೊಡಬೇಕೆಂದು ಹೇಳಿದ್ದರು.

★

ವಿಟಮಿನ್ನುಗಳು

ಪಶ್ಚಿಮ ಜರ್ಮನಿಯಲ್ಲಿ 10 ಸಾವಿರ ಮಂದಿ ವಿಟಮಿನ್ನುಗಳು ಇರುವರೆಂದು ವಂದಿಸಲಾಗಿದೆ.

★

ಎಮೂ : ರಾಳಿ

ಡನಾಂಗ್ — ದಕ್ಷಿಣ ವಿಯೆಟ್ನಾಮಿನ ವಿವಾನಗಳು ಒಂದು ಗ್ರಾಮದ ಮೇಲೆ ಬಾಂಬು ಮಾಡಿದರು : ಹೊರಿಗೆ ತಗಲಿದ ಬಾಂಬಿನಿಂದ ಅಲ್ಲಿದ್ದ 42 ಶಾಲಾಮಕ್ಕಳು ಹತರಾದರು

ಆಕ್ರಮಣ ಎದುರಿಸಲು ಭಾರತ ಸಿದ್ಧ

ನವದೆಹಲಿ — ಚೀನಾ, ಪಾಕಿಸ್ತಾನ ಸೇರಿಕೊಂಡು ಭಾರತಕ್ಕೆ ಅಕ್ಷರಶಃ ಭೀತಿ ಇದೆಯಾಗಿ, ಭಾರತವು ತನ್ನ ಸಶಸ್ತ್ರಪಡೆಯನ್ನು ಸಿದ್ಧವಾಗಿಟ್ಟಿದೆ ಎಂದು ರಕ್ಷಣಾ ಇಲಾಖೆಯ ವಂದಿ ತಿಳಿಸಿದೆ — 5 ಸಾವಿರ ಕೋಟಿಯ ಪಂಚವಾರ್ಷಿಕ ರಕ್ಷಣಾ ಯೋಜನೆ ಈ ವರ್ಷ ಪ್ರಾರಂಭವಾಗಿದ್ದು ಸೈನ್ಯದ ಬಲ 525000 ಕ್ಕೆ ಹೆಚ್ಚಿಸಲಾಗುವುದು — ವಿಮಾನ ದಳ ಉತ್ತಮಗೊಳಿಸಲು ನೂತನ ವಿಮಾನಗಳನ್ನು ಹೊಂದಬೇಕಾಗಿದೆ

ಮಕ್ಕಳು ಸುಟ್ಟುಹೋದರು

ಡೇಂಡಾರ್ — ಸಾಕ್ಸೇವುದ ಗ್ರಾಮದಲ್ಲಿ ಅಗ್ನಿ ಅನಾಹುತದಿಂದ ಮೂರು ಮಕ್ಕಳು ಸುಟ್ಟುಹೋದವು

ಬುದ್ಧ ವಿಗ್ರಹ

ಬ್ಯಾಂಗಕಾಕ್ — ಬುದ್ಧ ವಿಗ್ರಹವನ್ನು ಅಪ್ಪೀಸುಗಳಲ್ಲಿ ಮನೆಗಳಲ್ಲಿ ಅಲಂಕಾರಕ್ಕಾಗಿ ಬುದ್ಧ ವಿಗ್ರಹವನ್ನು ಉಪಯೋಗಿಸುವುದು ಪ್ರತಿಬಂಧಿಸಲಾಗಿದೆ

ಜನಾನಾದವರಿಗೆ ಬೈಸಿಕಲ್

ದಿಲ್ಲಿ — ಸಾಧ್ಯವಿರುವಷ್ಟು ಕಡಿಮೆ ಜನಾನಾದವರಿಗೆ ಮೋಟಾರು ಬದಲು ಬೈಸಿಕಲ್ ಉಪಯೋಗಿಸುವಂತೆ ನಿರ್ಧರಿಸಿರುವರು ; 50 ಲೇಡೀ ಬೈಸಿಕಲ್ಲಿಗೆ ಆರ್ಡರು ಕೊಟ್ಟಿರುವರು.

★

ದಿಲ್ಲಿಗೆ ಬೆಂಗಳೂರು ಸೊಳ್ಳೆ

ಬೆಂಗಳೂರಿನಿಂದ ದಿಲ್ಲಿಗೆ ಹೋಗುವ ವಿಮಾನಗಳಲ್ಲಿ ಸುಮಾರು 10 ಸಾವಿರ ಸೊಳ್ಳೆಗಳು ಹೋಗುತ್ತಿರುವಹೆದು ಶಾಸನ ಸಭೆಯಲ್ಲಿ ಮಂತ್ರಿ ಕೃಷ್ಣಪ್ಪನವರು ಹೇಳಿದರು.

★

ಹಳೇ ಬೈಸೂರು

ಬೆಂಗಳೂರು — ಎಲ್ಲ ರೀತಿಯ ಅಭಿವೃದ್ಧಿ ಚಟುವಟಿಕೆಯಲ್ಲಿಯೂ ಹಳೇ ಮೈಸೂರನ್ನು ನಿರ್ಲಕ್ಷಿಸಲಾಗಿದೆಯೆಂದು ಪ್ರಧಾನಿಗಳಿಗೆ ಮತ್ತು ಭಾರತ ಗೃಹ ಮಂತ್ರಿಗಳಿಗೆ ಮನವಿಪತ್ರ ಸಲ್ಲಿಸಲಾಗಿದೆ:

ಒಂದು ಶಾಲೆಯಲ್ಲಿ ಇಬ್ಬರು ಹೆಡ್ಮಾಸ್ಟರು

ಬೆಂಗಳೂರು — ಶಿವಮೊಗ್ಗಾ ಜಿಲ್ಲೆಯಲ್ಲಿನ ಒಂದು ಸ್ಕೂಲಿನಲ್ಲಿ ಇಬ್ಬರು ಹೆಡ್ಮಾಸ್ಟರುಗಳು ಇರುವ ವಿಷಯವನ್ನು ಶಾಸನಸಭೆಯಲ್ಲಿ ಒಬ್ಬ ಸದಸ್ಯರು ತಿಳಿಸಿದಾಗ ಅಶ್ಚರ್ಯವು ಉಂಟಾಯಿತು.

ಮನು ಸಂಹಿತೆಯನ್ನು ಯಾರು ಅಗೌರಿಸಿದರು ? ಮತ್ತು ಏಕೆ ?

★

(ಮುಂದುವರಿದುದು)

ಶ್ಲೋ ॥ ಶ್ರುತಿ ಸ್ಮೃತಿ ಪುರಾಣಾನಾಂ ವಿರೋಧೋಯತ್ರ ದೃಶ್ಯತೇ ।
ತತ್ರಶ್ರುತೇಃ ಪ್ರಾಧಾನ್ಯಂ ಸ್ಯಾದ್ ದ್ವಯೋ ದ್ವೈಧೇಸ್ಮೃತಿರ್ವರಾ ॥

ಬೇರೆ ಬೇರೆ ಸ್ಮೃತಿಗಳಲ್ಲಿ ಒಂದಕ್ಕೊಂದು ವಿರೋಧಾಭಿಪ್ರಾಯವಿದ್ದರೆ, ಪ್ರತಿಯೊಂದೂ ಪ್ರಮಾಣವೆಂದು ತಿಳಿಯಬೇಕು.

ಶ್ಲೋ ॥ ಸ್ಮೃತಿದ್ವೈ ದಾಂಕು ಶುಕ್ರಸ್ವಾಶ್ವತ್ಥರಿಕ್ರಂ ಧರ್ಮಾವುಭೌ ಸ್ಮೃತೌ ।
ಉಭಾವಪಿಹಿತೌ ಧರ್ಮೌ ಸಮ್ಯಗುಕ್ತಂ ಮುನೀಕ್ಷಿಭಿಃ ॥

ಆದರೆ, ಬೇರೆ ಸ್ಮೃತಿಗಳಿಗೂ, ಮನುಸ್ಮೃತಿಗೂ ವಿರೋಧ ಅಭಿಪ್ರಾಯಗಳಿದ್ದರೆ, ಆಗ ಮನುಸ್ಮೃತಿಯನ್ನೇ ಪ್ರಮಾಣವೆಂದು ಒಪ್ಪಬೇಕು : ಏಕೆಂದರೆ, ಮನುಸ್ಮೃತಿಯು ಸಂಪೂರ್ಣ ವೇದದ ಆಧಾರದ ಮೇಲೆಯೇ ರಚಿಸಲ್ಪಟ್ಟಿದೆ.

ಶ್ಲೋ ॥ ವೇದಾರ್ಥೋಪನಿ ಬಂಧೃತ್ವಾನ್ ಪ್ರಾಧಾನ್ಯಂಹಿ ಮನೋಃ ಸ್ಮೃತಿಮ್ ।
ಮನ್ವರ್ಥವಿಪರೀತಾಯಾಸಾಸ್ಮೃತಿರ್ನಪ್ರಶಸ್ಯತೇ ॥

ಆದುದರಿಂದ ಹಿಂದೂಗಳು ಮನುಸ್ಮೃತಿಯನ್ನು ಅಪೌರುಷೇಯವಾದ, ವೇದಕ್ಕೆ ಸಮಾನವಾದ ಪವಿತ್ರ ಗ್ರಂಥವಾಗಿ ತಿಳಿದಿರುತ್ತಾರೆ ; ಅಂಥಾ ಪವಿತ್ರ ಗ್ರಂಥವು ಎಳೆ ಈ ಕಾಲದಲ್ಲಿ ಹಿಂದೆ ಹೇಳಿದ ರೀತಿಯಲ್ಲಿ ಅಪಮಾನಿಸಲ್ಪಟ್ಟಿತು ಎಂಬುದನ್ನು ನಮ್ಮ ಬಂಧುಗಳ ಹಿತಚಿಂತನೆಗಾಗಿ ಜರ್ಜಿಸಬೇಕಾಗಿದೆ. [ಸಶೇಷ

Tirth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಪ್ರೊ॥ ಶಿವೇಂದ್ರಕುಮಾರ್ ಸಿದ್ಧಾಂತಶಾಸ್ತ್ರಿ, ಎಂ.ಎ, ಎಫ್ ಆರ್ ಎಸ್ ರವರ ಲೇಖನದಿಂದ ಸಂಗ್ರಹಿಸಿದ್ದು

ಅ. ನ. ಅಯ್ಯಂಗಾರ್



ಗೌರಿವಾಲ್ ಪವರ್ ಹೌಸ್‌ನ ಒಂದು ದೃಶ್ಯ

ವುಡ್‌ಲಾಂಡ್ ಜನಪ್ರಿಯತೆ 2 ನೇ ವಾರ

ಶಿ ನಿ

ಬಿಮಲ್ ರಾಯ್‌ರವರ — ಮನಮೋಹಕ ಹಿಂದಿ ಚಿತ್ರ

ಬೆನೆಜ್ಜೀರ್ BENAZIR

ನಾಶ್ರ— ಅಶೋಕಕುಮಾರ್, ವಿಮಾನಾಕುಮಾರಿ, ಶಶಿಕಪೂರ್, ನಿರೂಪಾರಾಯ್ ಕನುಜ

ಪ್ರತಿದಿನ 3 ಪ್ರದರ್ಶನಗಳು

ಆಪೆರಾ— ಜಯಪ್ರದ 3 ನೇ ವಾರ

ನಾಗಪೂಜಾ (ಕನ್ನಡ)

ತಾರಾಗಣ— ರಾಜಕುಮಾರ್, ಲೀಲಾವತಿ ರಾಜಶ್ರೀ, ರಾಘವೇಂದ್ರರಾವ್

ಅಮೋಘ ಪೌರಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

SHAKTI SUDHA

A Superb Tonic

Help The Gorakshana

"ಗೋರಕ್ಷಣ"ಕ್ಕೆ ಪೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಪೂರ್ವಾಶ್ರಮಸ್ವಾಮಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಾನಂಗಳವರ ಉದಾರ ಅನುಗ್ರಹ ದೃಷ್ಟಿಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶುಸಂಪತ್ತಿನ ಅಭಿವೃದ್ಧಿ, ಶಾಕಾಹಾರ ಪ್ರಚಾರ ವಿಚಾರಗಳಿಂದ ತುಂಬಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 30 ಪೈಸೆ ; 'ಗೋರಕ್ಷಣ'ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ಮಂದಸಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Praehara Nirata M S Krishna Rao
the Satyavadi Press Camarajapuram Mysore 4